ದಿನಾಂಕಃ 19-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನನ್ನ ತಂದೆ ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪ ಮೃತಪಟ್ಟು 60 ವರ್ಷಗಳು ಮೇಲ್ಪಟ್ಟಿವೆ. ನನ್ನ ಮದುವೆಯಾಗಿ 30 ವರ್ಷಗಳಾಗಿದೆ. ನನ್ನ ಗಂಡನ ಮನೆ ಹದಡಿ ಗ್ರಾಮ. ನಾನು ಮದುವೆಯಾದಾಗಿನಿಂದ ಅಲ್ಲೆ ವಾಸವಾಗಿದ್ದೆನೆ. 3 ಮತ್ತು 4 ನೇ ಪ್ರತಿವಾದಿಯರು ನನ್ನ ಅಕ್ಕಂದಿರು. ಅವರ ಮದುವೆಯ ನಂತರ ಅವರವರ ಗಂಡನ ಮನೆಯಾದ ತ್ಯಾವಣಿಗೆ ಮತ್ತು ತಣಿಗೆರೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸದರಿಯವರ ಮದುವೆ ನನ್ನ ಮದುವೆಯಾಗುವುದಕ್ಕಿಂತ ಮುಂಚೆ ನನ್ನ ತಂದೆಯ ಜೀವಿತಾವಧಿಯಲ್ಲಿ ಆಗಿರುತ್ತದೆ. ಹಾಗಾಗಿ ನನ್ನ ಮತ್ತು 3 ಮತ್ತು 4 ನೇ ಪ್ರತಿವಾದಿಯರ ಮದುವೆಯ ನಂತರ 1 ನೇ ಪ್ರತಿವಾದಿಯೊಂದಿಗೆ ನಾವು ಎಂದಿಗೂ ಜಂಟಿ ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ದೊಡ್ಡ ಅಕ್ಕನಾದ ರುದ್ರಮ್ಮನ ಮಗ. ಸದರಿ ರುದ್ರಮ ಮೃತಪಟ್ಟು 16 ವರ್ಷಗಳಾಗಿದೆ. ಸದರಿ ರುದ್ರಮ್ಮ ವಿವಾಹದ ನಂತರ ಅವರ ಗಂಡನ ಊರಾದ ರಾಮಗೊಂಡನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ತಣಿಗೆರೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ಅಕ್ಕನ ಗಂಡನಾದ ಗಂಗಾಧರಪ್ಪನವರು ಕೆ ಗಾಣದಕಟ್ಟೆ ಗ್ರಾಮದವರು. ಸದರಿ ಗಂಗಾಧರಪ್ಪನವರು ಸದರಿ ಕೆ ಗಾಣದಕಟ್ಟೆ ಗ್ರಾಮವನ್ನು ಬಿಟ್ಟು ಎಲ್ಲಿಗೂ ಹೋಗಿಲ್ಲ ಎಂದರೆ ಸರಿ. ಸದರಿ ಗಂಗಾಧರಪ್ಪನವರು ಕುಂಬಾರಿಕೆ ಮಾಡುತ್ತಿದ್ದರು. ನಾನು ಗೃಹಿಣಿ ಮತ್ತು ನನ್ನ ಗಂಡ ಬಟ್ಟೆ ಹೊಲಿಯುತ್ತಾರೆ. ನನ್ನ ಅಜ್ಜನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮಲ್ಲಪ್ಪ ಒಬ್ಬರೇ ಮಗ.

1983 ರಲ್ಲಿ ನೊಂದಾಯಿತ ಹಿಸ್ಸಾ ಪತ್ರವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆದೆಮ್ಮ ಎಂದರೆ ನನ್ನ ಅಮ್ಮ. 1983 ರಲ್ಲಿ ನನ್ನ ತಾಯಿ ಮತ್ತು ಅಣ್ಣನಾದ ತಿಪ್ಪೆಸ್ವಾಮಿ/ 1 ನೇ ಪ್ರತಿವಾದಿ ಸೇರಿ ಒಂದು ಪಾರ್ಟಿಯಾಗಿ ಮತ್ತು ನನ್ನ ದೊಡ್ಡಪ್ಪನಾದ ಹನುಮಂತಪ್ಪನವರ ವಾರಸುದಾರರು ಉಳಿದ ಪಕ್ಷಗಾರರಾಗಿ ಜಂಟಿ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ದಾವಾಸ್ತಿ ನನ್ನ ತಾಯಿ ಮತ್ತು 1 ನೇ ಪ್ರತಿವಾದಿಯ ಹಿಸ್ಸೆಗೆ ಜಂಟಿಯಾಗಿ ಬಂದಿದೆ ಎಂದರೆ ಸರಿ. ಹಾಗಾಗಿ 1983 ರಲ್ಲಿ ನನ್ನ ಮತ್ತು ನನ್ನ ಅಕ್ಕಂದಿರ ವಿವಾಹವಾಗಿತ್ತು ಎಂದರೆ ಸರಿ. ಹಾಗಾಗಿ 1983 ರಿಂದಲೂ ಇಲ್ಲಿಯವರೆಗೂ ಸಹ 1 ನೇ ಪ್ರತಿವಾದಿ ದಾವಾಸ್ತಿಯನ್ನು ತನ್ನ ಸ್ವಂತ ಹಕ್ಕಿನಿಂದ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ನಾವು ಯಾರು ಸಹ ಅವರ ಸ್ವಾಧೀನಾನುಭವಕ್ಕೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ತಂದೆ 1969 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮರಣಾ ನಂತರದಿಂದ 1983 ರವರೆಗೂ ದಾವಾಸ್ತಿಗಳಲ್ಲಿ ಆಗಲಿ ಅಥವಾ ನನ್ನ ತಂದೆಯ ಅಣ್ಣ ತಮ್ಮಂದಿರ ಒಟ್ಟು

ಕುಟುಂಬದ ಆಸ್ತಿಯಾಗಲಿ ಯಾವತ್ತಿಗೂ ನಾನಾಗಲಿ ನನ್ನ ಅಕ್ಕಂದಿರಾಗಲಿ ಹಕ್ಕು ಕೇಳಿಲ್ಲ ಎಂದರೆ ಸರಿ. ನಾನು ಈ ದಾವೆ ಹೂಡುವ ಪೂರ್ವ ನನ್ನ ಅಣ್ಣನನ್ನು ಈಗ್ಗೆ ಎರಡೂವರೆ ವರ್ಷಗಳ ಹಿಂದೆ ದಾವ್ತಾಯಲ್ಲಿ ಪಾಲು ಮಾಡಿಕೊಡುವಂತೆ ಕೇಳಿದ್ದು ಅದಕ್ಕೂ ಮುಂಚೆ ಎಂದಿಗೂ ಸಹ ನಾವು ಪಾಲುವಿಭಾಗ ಕೇಳಿಲ್ಲ ಎಂದರೆ ಸರಿ. ಸದರಿ ದಾವಾಸ್ತಿಯ ಪಾಲಿನ ವಿಚಾರವಾಗಿಹದಡಿ ಗ್ರಾಮದಲ್ಲಿ ಪಂಚಾಯತಿ ಎರಡುವರೆ ವರ್ಷಗಳ ಹಿಂದೆ ನಡೆದಿರುತ್ತದೆ. ತಣಿಗೆರೆ ಗ್ರಾಮದಲ್ಲಿ ಯಾವತ್ತಿಗೂ ಪಂಚಾಯತಿ ನಡೆದಿಲ್ಲ ಎಂದರೆ ಸಾಕ್ಷಿ ಹದಡಿ ಗ್ರಾಮದಲ್ಲಿ ಪಂಚಾಯಿತಿ ನಡೆದ ನಂತರ ತಣಿಗೆರೆ ಗ್ರಾಮದಲ್ಲಿ ಪಂಚಾಯತಿ ನಡೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಂಚಾಯತಿ ಯಾರ ಸಮಕ್ಷಮ ನಡೆದಿದೆ ಎಂದರೆ ನನಗೆ ಅವರ ಹೆಸರುಗಳು ಗೊತ್ತಿಲ್ಲ. ಹಾಗಾಗಿ ಈ ದಾವೆ ಹೂಡುವ ಸಲುವಾಗಿ ಸದರಿ ಪಂಚಾಯತಿ ಆದ ಬಗ್ಗೆ ಕಾರಣ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿ.

ನಿಪಿ-4 ರ ಕಾಲಂ ನಂ 11 ರಲ್ಲಿ ದಾವಾಸ್ತಿಯ ಮೇಲೆ ಸಾಲ ಇರುವುದರ ಬಗ್ಗೆ ನಮೂದು ಇದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಹಾಡುವ ಕಾಲಕ್ಕೆ ನಿಪಿ-4 ರಂತೆ ದಾವಾಸ್ತಿಯ ಮೇಲೆ ಸುಮಾರು 10 ಲಕ್ಷ ರೂ ಸಾಲ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಹಾಗಾಗಿ ಸದರಿ ನಿಪಿ-3 ರಂತೆ ದಾವಾಸ್ತಿಯ ಮೇಲೆ ಸಾಲವಿದ್ದು ಸದರಿ ಸಾಲಕೊಟ್ಟವರನ್ನು ಸಹ ಈ ದಾವೆಗೆ ಪಕ್ಷಗಾರರಾಗಿ ಸೇರಿಸಬೇಕಾಗಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದು ನನಗೆ ಗೊತ್ತಿಲ್ಲದಂತೆ ಸಾಲ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ 8-10 ವರ್ಷಗಳಿಂದ ಅಡಿಕೆ ಮತ್ತು ತೆಂಗಿನ ತೋಟವನ್ನು ಮಾಡಿರುತ್ತಾರೆ. ಸದರಿ ತೋಟದಲ್ಲಿ ಕೊಳವೆ ಬಾವಿಯನ್ನುಸಹ ಕೊರೆಸಿರುತ್ತಾರೆ ಎಂದರೆ ಸಾಕ್ಷಿ 3 ಎಕರೆ ಮಾರಿ ಕೊಳವೆ ಬಾವಿ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ. ಹಾಗಾಗಿ ದಾವಾಸ್ತಿಯ ಬೆಲೆ ಪ್ರತಿ ಎಕರೆಗೆ 2021 ನೇ ಸಾಲಿನಲ್ಲಿ 20 ಲಕ್ಷ ಮಾರುಕಟ್ಟೆ ಬೆಲೆ ಇದೆ ಎಂದರೆ ಸಾಕ್ಷಿ 10 ಲಕ್ಷ ಇದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಈ ದಾವೆಯನ್ನು ನಾನು ಸರಿಯಾದ ಮಾರುಕಟ್ಟೆ ಬೆಲೆಯನ್ನು ನ್ಯಾಯಾಲಯಕ್ಕೆ ತೋರಿಸದೆ ಸುಳ್ಳು ಮೌಲ್ಯ ಮಾಪನ ಮಾಡಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

1983 ರಿಂದ 2021 ರವರೆಗೆ 1 ನೇ ಪ್ರತಿವಾದಿ ಯಾವುದೇ ಅಡ್ಡಿ ಆತಂಕ ಇಲ್ಲದೆ ಸ್ವಾಧೀನಅನುಭವದಲ್ಲಿ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಹಾಗಾಗಿ ಈ ದಾವೆ ಹೂಡಲು ನನಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.